ಶ್ರೀ ಬಿ. ರಾಚಯ್ಯ.— ಯೂನಿವರ್ಸಿಟಿಯವರು ಏನು ಅಪ್ರೂವಲ್ ಮಾಡಿದ್ದಾರೆ ಅದಕ್ಕಿಂತ 128 ಜಾಸ್ತಿಯಾಗಿದೆ ಎಂದು ನಾನು ಹೇಳಿದ್ದು.

ಪ್ರಶ್ನೆ : 205 (666)

ವಿಷಯ : ಭುವನಹಳ್ಳಿಯಲ್ಲಿ ಕೃಷಿ ಶಾಲೆಯನ್ನು ಸ್ಥಾಪಿಸುವುದು

ಪ್ರಶ್ನೆ : ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಭುವನಹಳ್ಳಿ ಗ್ರಾಮ, ಮಾಲೂರು ತಾಲೂಕದಲ್ಲಿ ಕೃಷಿ ಪಾಠಶಾಲೆ ಪ್ರಾರಂಭಿಸಿರುವುದು ಸರಿಯಷ್ಟೇ ;

ಆ) ಶಾಲೆ ಪ್ರಾರಂಭವಾಗಿದ್ದರೂ ಅದರ ಕಾರ್ಯಕ್ರಮಗಳು ಬಹು ನಿಧಾನವಾಗಿರುವುದು ಸರಿಯೇ ;

ಇ) ಶಾಲೆಯ ಕಟ್ಟಡಗಳನ್ನು ಕಟ್ಟುವ ಬಗ್ಗೆಯೂ ಮತ್ತು ಇತರ ಎಲ್ಲಾ ಕಾರ್ಯಗಳೂ ನಿಧಾನವಾಗಿರುವ ಬಗ್ಗೆ ವಿವರಣೆ ನೀಡಲಾಗುವುದೇ?

ಉತ್ತರ : ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).— ಅ) ಹೌದು. ಆ) ಇಲ್ಲ.

ಇ) ಮೊದಲು ಶಾಲೆಯನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕಶಾಲೆಯ ಒಂದು ಕೊಠಡಿ ಮತ್ತು ಲೋಕೋಪಯೋಗಿ ಇಲಾಖೆಯಿಂದ ಕಟ್ಟಿಸಿದ ಎರಡು ಕೊಠಡಿಗಳಲ್ಲಿ ಶಾಲೆಯನ್ನು ಪ್ರಾರಂಭ ಮಾಡಲಾಗಿದೆ. ಕಟ್ಟಡ ಕಟ್ಟುವ ಬಗ್ಗೆ ಸರಕಾರದ ಪರಿಶೀಲನೆಯಲ್ಲಿದೆ

ಶ್ರೀ ಎ. ನಾಗರಾಜು.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪ್ರಶ್ನೆಯ (ಅ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ. ಆದರೆ ಈ ಕೃಷಿ ಪಾಠಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಲಾಡ್ಜಿಂಗ್ ಆಂಡ್ ಬೋರ್ಡಿಂಗ್ ಒದಗಿಸುವ ವ್ಯವಸ್ಥೆ ಹಾಗೆಯೇ ಇದುವರೆಗೂ ಕೂಡ ಸರ್ಕಾರದವರು ಒದಗಿಸಿಲ್ಲ. ಅವರಿಗೆ ಲಾಡ್ಜಿಂಗ್ ಮತ್ತು ಬೋರ್ಡಿಂಗ್ ವ್ಯವಸ್ಥೆ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಎರಡನೆಯದಾಗಿ ಪ್ರಶ್ನೆ (ಇ)ಗೆ ಉತ್ತರವಾಗಿ ಮೊದಲು ಶಾಲೆಯನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಶಾಲೆಯ ಒಂದು ಕೊಠಡಿ ಮತ್ತು ಲೋಕೋಪಯೋಗಿ ಇಲಾಖೆಯಿಂದ ಕಟ್ಟಿಸಿದ ಎರಡು ಕೊಠಡಿಗಳಲ್ಲಿ ಶಾಲೆಯನ್ನು ಪ್ರಾರಂಭ ಮಾಡಲಾಗಿದೆ. ಕಟ್ಟಡ ಕಟ್ಟುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಅಂತ ಹೇಳಿದ್ದೀರಿ. ಮುಂದಿನ ವರ್ಷವಾದರೂ ಕೂಡ ಈ ಕಟ್ಟಡವನ್ನು ಕಟ್ಟಿ ಮುಗಿಸುತ್ತೇವೆ ಅನ್ನುವ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ.ಎಲ್. ಗೌಡ — ಈ ಶಾಲೆ ಪ್ರಾರಂಭವಾದುದ್ದು 1983ರ ಜೂನ್‌ನಲ್ಲಿ ಆವಾಗ ಜಾಗ ಇಲ್ಲದೆ ಟೆಂಪರರಿಯಾಗಿ ಶೆಡ್ ಹಾಕಿ ಪ್ರಾರಂಭ ಮಾಡಿದ್ದೇವೆ. ಇದನ್ನು ಕಟ್ಟುವುದಕ್ಕೆ 5ಲಕ್ಷದ 22 ಸಾವಿರ ರೂಪಾಯಿ ಅಂದಾಜು ಮಾಡಿದ್ದಾರೆ. ಆ ಕಟ್ಟಡದ ಎಸ್ಟಿಮೇಟ್ ಮತ್ತು ಪ್ಲಾನ್ ಅನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಆದರೆ ನಮ್ಮ ಸಂಪನ್ಮೂಲಗಳನ್ನು ನೋಡಿಕೊಂಡು ಆದಷ್ಟು ಜಾಗ್ರತೆಯಾಗಿ ಆ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ : 206 (600 ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ.— ಸದಸ್ಯರು ಹಾಜರಿಲ್ಲ.

ವಿಷಯ : ಕಾಲೇಜು ಶಿಕ್ಷಣ ಇಲಾಖೆಯಲ್ಲಿ ರಿಜಿಸ್ಟ್ರಾರ್ ಹುದ್ದೆಗಳನ್ನು ಭರ್ತಿ ಮಾಡುವುದು

ಪ್ರಶ್ನೆ : 206 (600) ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಜಗಳೂರು). - ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರವು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ರಿಜಿಸ್ಟ್ರಾರ್ ಹುದ್ದೆಗಳನ್ನು ನಿರ್ಮಿಸಿರುವುದು ನಿಜವೇ ;

ಆ) ಹಾಗಿದ್ದರೆ ನಿರ್ಮಿಸಿದ ಹುದ್ದೆಗಳ ಸಂಖ್ಯೆ ಮತ್ತು ಯಾವಾಗ ನಿರ್ಮಿಸಲ್ಪಟ್ಟಿದೆ ;

ಇ) ಹುದ್ದೆಗಳು ಕುಂಬಲ್ಪಟ್ಟಿವೆಯೇ ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣಮಂತ್ರಿಗಳು).— ಅ) 23 ಕಾಲೇಜುಗಳ, 23 ಕಛೇರಿ ಮತ್ತು ಅಧೀಕ್ಷಕರ ಹುದ್ದೆಗಳನ್ನು

ಆ) ದಿನಾಂಕ 17-12-82 ರಂದು ರಿಜಿಸ್ಟ್ರಾರ್‌ಗಳೆಂದು ಮೇಲ್ದರ್ಜೆಗೇರಿಸಲ್ಪಟ್ಟಿದೆ.

ಇ) ಇನ್ನೂ ಇಲ್ಲ. ಈ ಹುದ್ದೆಗಳನ್ನು ತುಂಬಲು ನೇಮಕಾತಿ ನಿಯಮಗಳ ಸೂಕ್ತ ಬದಲಾವಣೆಗಳನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ವಿಷಯ : ಕರ್ನಾಟಕ ರಾಜ್ಯ ಬಿತ್ತನೆ ಬೀಜಾಭಿವೃದ್ಧಿ ನಿಗಮ ನಿಯಮಿತ

ಪ್ರಶ್ನೆ : 207 (564) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಡಿ.ಸಿ.ಎಚ್. 32 ಹತ್ತಿ ಬೀಜೋತ್ಪಾದಕರಿಗೆ ಕರ್ನಾಟಕ ರಾಜ್ಯ ಬೀಜ ನಿಗಮವರು 10 ಗುಂಟೆಯ ಒಂದು ಪ್ಲಾಟಿಗೆ ನಿಗದಿಪಡಿಸಿರುವ ಮುಂಗಡ ಠೇವಣಿ ಎಷ್ಟು ;